


# ಕರೀಗೌಡ ಬೀಚನಹಳ್ಳಿ

ಕಲೆ: ಮುರಳೀಧರ ರಾಥೋಡ್


'ತಂಗೀ, ಸ್ವಲ್ಪ ನಿಲ್ಲು, ಹೊತ್ತಾರೆಯಿಂದ ಒಂದೇ ಸಮನೇ ನಡೆದು ನಡೆದು ಸಾಕಾಯ್ತು. ಬಿಸಿಲೂ ಏರುತ್ತಿದೆ. ಈ ಮರದಡಿಯಲ್ಲಿ ಸ್ವಲ್ಪ ಹೊತ್ತು ಕೂತು ಜೀವ ಸುಧಾರಿಸಿಕೊಂಡು ಆಮೇಲೆ ನಡೆಯುವ' ಎಂದಳು ಅಕ್ಕ.

ಯಾವುದೋ ಯೋಚನೆಯಲ್ಲಿ ಮುಳುಗಿ ಹೋಗಿದ್ದ ತಂಗಿ ಅಕ್ಕನ ಮಾತನ್ನು ಕಿವಿಗೆ ಹಾಕಿಕೊಳ್ಳದೆ ನಡೆಯುತ್ತಲೇ ಇದ್ದಳು. ಅಕ್ಕ, ಮತ್ತೆ ತಂಗಿಯ ತೋಳು ಹಿಡಿದು ಜಗ್ಗಿ ಹಿಂದಕ್ಕೆ ಮರದ ನೆರಳಿಗೆ ಎಳೆದು ಕೂರಿಸಿದಾಗಲೇ ತಂಗಿಗೆ ಎಚ್ಚರವಾದದ್ದು.

ಅಕ್ಕ ನೆರಳಿನಲ್ಲಿ ಕೂರುತ್ತ, 'ನಾನು ನಿನಗೆ ಆಗಿನಿಂದಲೂ ಹೇಳುತ್ತಲೇ ಇದ್ದೇನೆ. ನೀನು ಮಾತ್ರ ಮೂದೇವಿಯ ಹಾಗೆ ನಡೆಯುತ್ತಲೇ ಇದ್ದೀಯಲ್ಲ. ಕೂತ್ಕೋ, ಯಾಕೆ ನಿಂತೇ ಇದ್ದಿ? ನಿನಗೆ ಸುಸ್ತು, ದಣಿವು ಏನೂ ಆಗ್ತಾನೆ ಇಲ್ಲವಾ? ನಮ್ಮನೆಯಲ್ಲಿಯೂ ಹಿಂಗೇ ಮಂಕಾಗಿದ್ರೆ ಆಗದು, ಚುರುಕಾಗಿರ್ಬೇಕು. ಅಯ್ಯೋ, ನಿನ್ನ ಆ ಶಿವ್ನೇ ಕಾಪಾಡಬೇಕು' ಎಂದು ತಂಗಿಯ ಮೇಲೆ ಅರ್ಧ ಸಿಟ್ಟು, ಅರ್ಧ ಮುನಿಸು, ಅರ್ಧ ಬೇಸರ ಎಂಬಂತೆ ತನ್ನೆಲ್ಲಾ ಭಾವಗಳನ್ನು ಒಮ್ಮೆಗೇ ಗೊಣಗುಟ್ಟಿದಳು.

'ಹೌದು ಅಕ್ಕ, ನೀನು ನನ್ನನ್ನು ಮಾತನಾಡಿಸಿದಾಗ ನಾನು ಯಾವುದೋ ಕನಸಿನಲ್ಲಿ ತೇಲುತ್ತಿದ್ದಂತೆ ಆಗುತ್ತಿತ್ತು. ನಿನ್ನ ಜೊತೆಯಲ್ಲಿ ಸುಮ್ಮನೆ ನಾನೊಂದು ಗೊಂಬೆಯಂತೆ ನಡೆಯುತ್ತಿದ್ದೇನೆ ಅನ್ನಿಸುತ್ತಿತ್ತು. ಹೊತ್ತಾರೆಯಿಂದ ನಡೆಯುತ್ತಾ ಹೊರಟ ನನಗೆ ಯಾಕೋ ಊಟ, ನೀರು, ಬಾಯಾರಿಕೆ ಯಾವುದರ ಪರಿವೆಯೂ ಆಗುತ್ತಿಲ್ಲ' ಎಂದಳು ತಂಗಿ.

ಅಕ್ಕ ತನ್ನ ತಂಗಿಯನ್ನು ತನ್ನ ತವರಿನಿಂದ ತನ್ನ ಗಂಡನ ಮನೆಗೆ ಕರೆದುಕೊಂಡು ಹೊರಟಿದ್ದಳು. ಅವರಿಬ್ಬರೂ ಊರಿನಲ್ಲಿ ಮನೆಬಿಟ್ಟು ಹೊರಟಾಗ ಕುಯಿಲು ಹೊತ್ತಾಗಿತ್ತು. ಈಗ ಆಕಾಶದಲ್ಲಿ ಸೂರ್ಯ ನೆತ್ತಿಮೇಲೆ ಬಂದಿದ್ದ. ಅವರು ನಡೆಯುವ ದಾರಿ ಇನ್ನೂ ಅರ್ಧ ಬಾಕಿ ಉಳಿದಿತ್ತು. ಊರಿನ ಹೆಣ್ಣುಮಕ್ಕಳು ಮನೆಗೆ ಸೊಪ್ಪು ನೀರು ತರುವ ಹೊತ್ತಿಗೆ ಅವರು ಅಕ್ಕನ ಊರನ್ನು ತಲುಪಲಿದ್ದರು. ಅವಳ ನೆನಪು ಹಿಂದಕ್ಕೋಡಿತು:

ಚಿಕ್ಕ ವಯಸ್ಸಿಗೇ ನನ್ನನ್ನು ಅಕ್ಕ ತನ್ನ ಮನೆಗೆ ತಂದು ಸಾಕಿಕೊಂಡಿದ್ದಳು. ತನಗೆ ಮಕ್ಕಳಿಲ್ಲ ಎಂದು. ನನಗೆ ಮೈನೆರೆಯುವ ಮುಂಚೆಯೇ ಪಕ್ಕದ ಊರಿಗೆ ಮದುವೆ ಮಾಡಿಕೊಟ್ಟಿದ್ದಳು. ಆದರೆ, ನನಗೆ ಪ್ರಸ್ತ ಆಗುವ ಮುಂಚೆಯೇ ನನ್ನ ಗಂಡ ಬಾವಿ ನೀರಿಗೆ ಹೋದಾಗ ಕಾಲು ಜಾರಿ ಬಿದ್ದು ಸತ್ತು ಹೋಗಿದ್ದ. ಆಮೇಲೆ ಅಕ್ಕ ನನ್ನನ್ನು ನನ್ನ ಗಂಡನ ಮನೆಗೆ ಕಳಿಸಲೇ ಇಲ್ಲ. ನನ್ನ ಗಂಡನಿಗೆ ಒಡಹುಟ್ಟಿದ್ದ ಅಣ್ಣಂದಿರು, ಅಕ್ಕಂದಿರು ಇದ್ದರು. ಆಗ ನಾನು ಇನ್ನು ಏನೂ ಅರಿಯದ ಹುಡುಗಿ. ಗಂಡ ಸತ್ತು ವಿಧವೆ ಪಟ್ಟ ಕಟ್ಟಿಕೊಂಡು ಬಂದ ನಂತರ ನಾನು ಅಕ್ಕನ ಮನೆಯಲ್ಲೇ ಉಳಿದೆ.

ಅವ್ವನಿಗೆ ನನ್ನ ಅಕ್ಕ ಹಿರಿಮಗಳು. ನಾನು ಒಂಬತ್ತನೆಯವಳು, ಕೊನೆಮಗಳು. ನನಗೂ ಅಕ್ಕನಿಗೂ ವಯಸ್ಸಿನ ಅಂತರ ತುಂಬಾ. ನಾನು